**ಮೊದಲನೇ ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ.**
CC No. 891/2013

CW -4 PW - 1

| | | |
|---|---|---|
| ಹೆಸರು | ಃ | ಬಾಲುನಾಯ್ಕ |
| ತಂದೆಯ ಹೆಸರು | ಃ | ಮುನಿಯಾನಾಯ್ಕ |
| ವಯಸ್ಸು | ಃ | 65 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸ | ಃ | ಕೊಕ್ಕೆದೊಡ್ಡಿ |

ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ಯವರಿಂದ ಃ ದಿನಾಂಕ 19.04.2024

ನ್ಯಾಯಾಲಯದ ಮುಂದಿರುವ ಆರೋಪಿತರು ಗೊತ್ತಿಲ್ಲ. ಚಾಸಾ-1 ರಿಂದ 3 ರವರು ಗೊತ್ತಿಲ್ಲ.

ಆರೋಪಿತರು ಮತ್ತು ಚಾಸಾ-1 ಮತ್ತು 2 ರವರ ನಡುವೆ ಯಾವುದೇ ಗಲಾಟೆ ನಡೆದಿಲ್ಲ. ನಾನು ಯಾವುದೇ ಜಗಳವನ್ನು ಕಣ್ಣಾರೆ ನೋಡಿರುವುದಿಲ್ಲ ಮತ್ತು ಯಾವುದೇ ಜಗಳವನ್ನು ಬಿಡಿಸಿರುವುದಿಲ್ಲ. ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲುಗೆ ಅನುಮತಿ ಕೋರಿರುತ್ತಾರೆ. ಅನುಮತಿಸಲಾಯಿತು)**

ದಿಃ 13.10.2013 ರಂದು ಸಂಜೆ 4 ಗಂಟೆ ಸಮಯದಲ್ಲಿ ನಾನು ಚಾಸಾ-1 ರವರ ಜಮೀನಿನ ಬಳಿ ಇದ್ದಾಗ ಚಾಸಾ-2 ಮತ್ತು 3 ರವರು ಚಾಸಾ-1 ರವರು ಜಮೀನಿನಲ್ಲಿ ಕೆಲಸ ಮಾಡುತ್ತಿದ್ದರು ಅದೇ ಸಮಯಕ್ಕೆ ಆರೋಪಿತರು ಏಕಾಏಕಿ ಚಾಸಾ-1 ರವರ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿದರು ಎಂದರೆ ಸರಿಯಲ್ಲ. ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಚಾಸಾ-2 ರವರ ಹತ್ತಿರ 1 ಮತ್ತು 2 ನೇ ಆರೋಪಿತರು ಹೋಗಿ ಕೈಗಳಿಂದ ಹೊಡೆದರು ಎಂದರೆ ಸರಿಯಲ್ಲ. 3 ರಿಂದ 5 ನೇ ಆರೋಪಿತರು ಚಾಸಾ-2 ರವರ ಜುಟ್ಟು ಹಿಡಿದು ಎಳೆದಾಡಿ ಕೈಗಳಿಂದ ಹಲ್ಲೆ ಮಾಡಿದರು ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋಗಿ ಜಗಳ

ಬಿಡಿಸಿರುತ್ತೇನೆಂದರೆ ಸರಿಯಲ್ಲ. ನಂತರ ಚಾಸಾ-2 ಮತ್ತು 3 ರವರಿಗೆ 1 ಮತ್ತು 2 ನೇ ಆರೋಪಿತರು ಜಮೀನಿನಿಂದ ಆಚೆ ಹೋದರೆ ಸರಿ, ಇಲ್ಲ ನಿಮ್ಮನ್ನು ಕೊಲೆ ಮಾಡುತ್ತೇವೆಂದು ಪ್ರಾಣ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ನನಗೆ ಈಗ ಓದಿ ಹೇಳಿದಂತೆ ಪೋಲೀಸರ ಮುಂದೆ ಹೇಳಿಕೆ ನೀಡಿದ್ದೇನೆಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಹೇಳಿಕೆಯನ್ನು ನಿಪಿ-1 ಎಂದು ಗುರುತಿಸಲಾಯಿತು.

ಆರೋಪಿಗಳೊಂದಿಗೆ ರಾಜೀ ಮಾಡಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು : ಆರೋಪಿ ಪರ ಶ್ರೀ. ವಕೀಲರಿಂದಃ</u>**

ಏನು ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಮೊದಲನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಕನಕಪುರ